ಸಮುದಾಯಗಳ ಪಾರಂಪರಿಕ ಆಸ್ತಿಗಳು ತಮ್ಮದೇಆದ ಮಹತ್ವವನ್ನು ಹೊಂದಿವೆ. ಶತಮಾನಗಳ ಕಾಲ ಅವು ತಮ್ಮಕಂಪನ್ನು ಬೀರುತ್ತಲೇಇರುತ್ತವೆ. ಪಾರಂಪರಿಕ ನಗರ ಮೈಸೂರುಇಂತಹ ಹಲವಾರು ಸುವಾಸನೆಗಳ ತಾಣ. ಅವುಗಳಲ್ಲಿ ಶತಮಾನದಿಂದ ಜ್ಞಾನದಾಹಿಗಳ ಆಶ್ರಯತಾಣವಾಗಿರುವ ಮೈಸೂರು ನಗರಕೇಂದ್ರಗ್ರಂಥಾಲಯವೂಒಂದು. ಈ ಅಪ್ಪಟ, ಸುಂದರಜ್ಞಾನ ಭಂಡಾರಕ್ಕೆತಮಗೆ ಸುಸ್ವಾಗತ. ಮೈಸೂರುಅರಸರದೂರದೃಷ್ಟಿತ್ವದ ಫಲವಾಗಿ ಎದ್ದು ನಿಂತ ಈ ಜ್ಞಾನದೇಗುಲ ಶತಮಾನದ ಕಾಲದಿಂದಲೂ ಜ್ಞಾನದಾಹಿಗಳ ಹಸಿವನ್ನು ನೀಗಿಸುತ್ತಲೇಇದೆ. ಇಲ್ಲಿಓದುವ ಕೋಣೆಗಳು, ಆಕರ ವಿಭಾಗ, ನಿಯತಕಾಲಿಕೆಗಳ ವಿಭಾಗ ಹೀಗೆ ಜ್ಞಾನ ಸಂಗ್ರಹಿಸುವವರಿಗೆಅಗತ್ಯವಾದಎಲ್ಲ ಸೌಲಭ್ಯಗಳೂ ಇಲ್ಲಿವೆ. ಕುವೆಂಪು ಓದುವಕೋಣೆ, ಆಡಳಿತ ವಿಭಾಗಎಲ್ಲ ಸೇರಿಇದೊಂದು ವಿಶ್ವವಿದ್ಯಾಲಯವೇಆಗಿದೆ. ಈಗ ಇಲ್ಲಿ1.20 ಲಕ್ಷ ಪುಸ್ತಕಗಳಿದ್ದು ಪ್ರತಿ ವರ್ಷ5 ಸಾವಿರ ಪುಸ್ತಕಗಳು ಹೊಸದಾಗಿ ಸೇರ್ಪಡೆಯಾಗುತ್ತಿವೆ. ಸಾರ್ವಜನಿಕರಿಲ್ಲದೆ ವಿಶ್ವವಿದ್ಯಾಲಯಗಳ ಸಂಶೋಧಕರಿಗೆ ಮತ್ತುಇತರ ಸ್ನಾತಕೋತ್ತರ ಪದವೀಧರರಿಗೂಯಾವಾಗಲೂ ಈ ಗ್ರಂಥಾಲಯ ನೆರವಾಗುತ್ತಿದೆ.

ಇಲ್ಲಿಅತ್ಯದ್ಭುತ ಮಾಹಿತಿಗಳ ಸಂಗ್ರಹವಿದೆ. ಅಂತರ್ಜಾಲ ಸೌಲಭ್ಯವಿದ್ದು, ಮುದ್ರಿತ ಪುಸ್ತಕಗಳನ್ನು ವ್ಯವಸ್ಥಿತವಾಗಿ ಜೋಡಿಸಿಡಲಾಗಿದೆ. ಯಾವುದೇ ಪುಸ್ತಕ ಅಗತ್ಯಕ್ಕೆತಕ್ಕಂತೆ ಲಭ್ಯವಿದೆ. ವೆಬ್‌ಸೈಟ್ ಲ್ಲಿಯೂ ಪುಸ್ತಕಗಳನ್ನು ಹುಡುಕಬಹುದಾಗಿದೆ. ಗ್ರಂಥಾಲಯಕ್ಕೆ ಭೇಟಿ ನೀಡುವಯಾರಿಗೂ ನಿರಾಸೆಇಲ್ಲ. ಯಾವುದೇ ಸಂದರ್ಭದಲ್ಲಿ ಸೂಕ್ತ ನೆರವು ನೀಡುವ ಸಿಬ್ಬಂದಿಗಳಿದ್ದಾರೆ. ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ, ಅಧ್ಯಾಪಕರಿಗೆ, ಸಂಶೋಧನಾ ವಿದ್ಯಾರ್ಥಿಗಳಿಗೆ ಎಲ್ಲರಿಗೂ ನೆಚ್ಚಿನತಾಣ. ಅವರಅಧ್ಯಯನಕ್ಕೆಯೋಗ್ಯವಾದ ವಸ್ತು, ವಿಷಯಗಳೂ ಇಲ್ಲಿ ಲಭ್ಯ. ವಿಜ್ಞಾನ, ಸಾಮಾಜಿಕ ವಿಜ್ಞಾನ ಮುಂತಾದಎಲ್ಲ ವಿಭಾಗಗಳ ಮಾಹಿತಿಗಳೂ ಇಲ್ಲಿ ಲಭ್ಯ. ಎಲೆಕ್ಟ್ರಾನಿಕ್ ಸೌಲಭ್ಯವೂಇದೆ. ಗ್ರಂಥಾಲಯದ ವೆಬ್‌ಸೈಟ್‌ನಲ್ಲಿಯೂಎಲ್ಲ ಮಾಹಿತಿಗಳು ಸಿಗುತ್ತವೆ. ಇದೊಂದು ಹೆಬ್ಬಾಗಿಲು. ಓದುಗರು ಮತ್ತು ಸದಸ್ಯರುಇಲ್ಲಿಗೆ ಭೇಟಿ ನೀಡಿಅಗತ್ಯ ಮಾಹಿತಿ ಪಡೆಯಬಹುದು. ನಿಮ್ಮಎಲ್ಲರೀತಿಯ ಸಕಾರಾತ್ಮಕ ಸಲಹೆಗಳಿಗೆ ಮುಕ್ತ ಸ್ವಾಗತವಿದೆ. ನಿಮ್ಮ ಸೇವೆಗೆ ಸದಾ ಸಿದ್ಧ. ನಿಮಗೆ ಮತ್ತು ನಿಮ್ಮಅಧ್ಯಯನಕ್ಕೆ ನಾವು ಯಾವರೀತಿ ನೆರವು ನೀಡಬೇಕುಎಂದು ತಿಳಿಸಿದರೆ ಅದಕ್ಕೆ ಪೂರಕವಾಗಿ ಸೇವೆ ಸಲ್ಲಿಸಲು ನಾವು ಸಿದ್ಧರಿದ್ದೇವೆ. ನಿಮ್ಮಎಲ್ಲರೀತಿಯ ಅಗತ್ಯಗಳೀಗೆ ಸ್ಪಂದಿಸುವುದು ನಮ್ಮಧರ್ಮ. ಅದೇ ನಮ್ಮಕರ್ತವ್ಯ. ಒಟ್ಟಿನಲ್ಲಿ ನಮ್ಮ ನಗರಕೇಂದ್ರಗ್ರಂಥಾಲಯ ಮೈಸೂರುಜನಸಾಮಾನ್ಯರ ವಿಶ್ವವಿದ್ಯಾಲಯವೇಆಗಿದೆ.

ಮಂಜುನಾಥ್ ಬಿ.
ಉಪ ನಿರ್ದೇಶಕರು,
ಸಾರ್ವಜನಿಕಗ್ರಂಥಾಲಯ ಇಲಾಖೆ,
ನಗರಕೇಂದ್ರಗ್ರಂಥಾಲಯ
ಮೈಸೂರು.